ಇ) ಸದರಿ ಗೋಲಿಬಾರ್‌ನಲ್ಲಿ ಗಾಯಗೊಂಡವರಿಗೆ ಗಾಯದ ತೀವ್ರತೆಗನುಗುಣವಾಗಿ ಸೂಕ್ತ ಪರಿಹಾರಧನ ನೀಡಲಾಗಿದೆ. ಅದರಂತೆ ಇದುವರೆಗೆ ತೀವ್ರತರ ಗಾಯಗೊಂಡ ಒಬ್ಬ ವ್ಯಕ್ತಿಗೆ ನಿಯಮಾನುಸಾರ ರೂ. 1,500ಗಳ ಪರಿಹಾರ ನೀಡಿದೆ. ಉಳಿದ 8 ಜನ ಗಾಯಾಳುಗಳು ವೈದ್ಯಕೀಯ ಪ್ರಮಾಣ ಪತ್ರ ಒದಗಿಸಿಲ್ಲವಾದ್ದರಿಂದ ಇದುವರೆಗೆ ಪರಿಹಾರಧನ ನೀಡಿಲ್ಲ. ಸದರಿಯವರ ಪೈಕಿ, ಅರ್ಹರಿಗೆ ನಿಯಮಾನುಸಾರ ಸೂಕ್ತ ಪರಿಹಾರಧನ ನೀಡಲು ವೈದ್ಯಕೀಯ ಪ್ರಮಾಣ ಪತ್ರವನ್ನು ಕಾಯಲಾಗಿದೆ.

ಮುಖ್ಯಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮ

182 - ಶ್ರೀ ಜಗದೀಶ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಇತ್ತೀಚಿನ ಮುಖ್ಯಮಂತ್ರಿಗಳ 'ಜನತಾ ದರ್ಶನ' ಕಾರ್ಯಕ್ರಮಗಳಲ್ಲಿ ಸಾರ್ವಜನಿಕರಿಂದ ಬಂದ ಒಟ್ಟು ಮನವಿ ಪತ್ರಗಳ ಸಂಖ್ಯೆ ಎಷ್ಟು?*

ಆ) *ಅವುಗಳಲ್ಲಿ ಇಲ್ಲಿಯವರೆಗೆ ಜನತಾ ದರ್ಶನ ಕೈಗೊಂಡ ಸ್ಥಳಗಳಾವುವು ಹಾಗೂ ಈ ಜನತಾ ದರ್ಶನಗಳಿಗೆ ತಗುಲಿದ ವೆಚ್ಚ ವೆಷ್ಟು? ಎಷ್ಟು ಮನವಿ ಪತ್ರಗಳಿಗೆ ಪರಿಹಾರ ನೀಡಲಾಗಿದೆ.*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 16,122

ಆ)

1)	ಮೈಸೂರು	2)	ಮಡಿಕೇರಿ
3)	ಹಾಸನ	4)	ಚಿಕ್ಕಮಗಳೂರು
5)	ಶಿವಮೊಗ್ಗ	6)	ಚಿತ್ರದುರ್ಗ
7)	ತುಮಕೂರು	8)	ಬಿಜಾಪುರ
9)	ಗುಲ್ಬರ್ಗಾ	10)	ಬೀದರ್
11)	ಬೆಳಗಾಂ	12)	ಧಾರವಾಡ
13)	ರಾಯಚೂರು	14)	ಬಳ್ಳಾರಿ

ಇತ್ತೀಚಿನ ಜಿಲ್ಲಾ ಪ್ರವಾಸ ಕಾರ್ಯಕ್ರಮಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟ ಜಿಲ್ಲೆಗಳ ವಿವಿಧ ನೀರಾವರಿ ಕಾಮಗಾರಿಗಳನ್ನು ಪರಿಶೀಲಿಸುವುದರ ಜೊತೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಪರಿಶೀಲನೆಯನ್ನು ಸಹ ನಡೆಸಿರುತ್ತಾರೆ. ಜನತಾ ಸಂದರ್ಶನವು ಈ ಮೇಲಿನ ಕಾರ್ಯಕ್ರಮಗಳ ಒಂದು ಅಂಗವಾಗಿರುತ್ತದೆಯಷ್ಟೆ.

ಸಾರ್ವಜನಿಕರಿಂದ ಸ್ವೀಕರಿಸಿದ ಅರ್ಜಿಗಳಿಗೆ ಪರಿಹಾರ ನೀಡಲು ಮೂರು ತಿಂಗಳವರೆಗೆ ಸಮಯ ನೀಡಲಾಗಿದೆ ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಜಿಲ್ಲೆಗಳಿಂದ ವರದಿಗಳನ್ನು ಕೇಳಲಾಗಿದೆ.

ಹುಬ್ಬಳ್ಳಿ ನವನಗರದಲ್ಲಿ ನಡೆದ ಕೊಲೆಯ ವಿಚಾರಣೆ

89 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ ಧಾರವಾಡ ಮಹಾ ನಗರದ ನವನಗರದಲ್ಲಿ ಇತ್ತೀಚಿನ ತಿಂಗಳಲ್ಲಿ ನಡೆದ ದರೋಡೆಯಲ್ಲಿ ಬಸವರಾಜ ಮುನವಳ್ಳಿ ಎಂಬ ಯುವಕನ ಕೊಲೆ ಪ್ರಕರಣದ ವಿಚಾರಣೆ ಯಾವ ಹಂತದಲ್ಲಿ ಇದೆ?*